ವಿಷಯ:- ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ, ಮೆಕ್ಯಾನಿಕ್‌ಗಳ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 218 (104)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕ, ನಿರ್ವಾಹಕ, ಮೆಕ್ಯಾನಿಕ್‌ಗಳ ಹುದ್ದೆ ಖಾಲಿಯಿರುವುದರಿಂದ ಅನೇಕ ಅನುಸೂಚಿಗಳು ರದ್ದಾಗಿರುವುದರಿಂದ ಹಾಗೂ ತಡವಾಗಿ ಹೊರಡಿಸಿರುವುದರಿಂದ ನಾಗರೀಕರಿಗೆ ತೊಂದರೆ ಆಗುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ, ಮೆಕ್ಯಾನಿಕ್‌ಗಳ ಸಂಖ್ಯೆ ಎಷ್ಟು?

ಇ) ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಬಂದಿದೆ.

ಆ) ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕ, ನಿರ್ವಾಹಕ, ಮೆಕ್ಯಾನಿಕ್ ಹುದ್ದೆಗಳ ಖಾಲಿ ಇರುವ ವಿವರ ಈ ರೀತಿ ಇದೆ.

ಚಾಲಕ	:429
ನಿರ್ವಾಹಕ	:1318
ಮೆಕ್ಯಾನಿಕ್	:2189

ಇ) ಚಾಲಕ, ನಿರ್ವಾಹಕ ಹಾಗೂ ತಾಂತ್ರಿಕ ವರ್ಗದಲ್ಲಿ 3936 ಹುದ್ದೆಗಳಿದ್ದು ಅವುಗಳನ್ನು ನೇರ ನೇಮಕಾತಿಯ ಮೂಲಕ ತುಂಬಿಕೊಳ್ಳಲು ಕ್ರಮ ಜರುಗಿಸಲಾಗಿದೆ.

ವಿಷಯ:- ಬಾದಾಮಿ ತಾಲ್ಲೂಕಿನಲ್ಲಿ ಜಮೀನುಗಳು ಸವಳು, ಜವಳುಗಳಿಂದ ಆವರಿಸಿಕೊಂಡಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 219 (520)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಬಾದಾಮಿ ತಾಲ್ಲೂಕಿನ ಕಾಕನೂರ, ಬೆಳವನಕೊಪ್ಪ, ನೀಲಗುಂದ, ಬಂಕನೇರಿ,

ತಿಮ್ಮಾಪುರ ಗ್ರಾಮಗಳಿಗೆ ಎಷ್ಟು ವರ್ಷಗಳಿಂದ ಜಮೀನು ಸವಳುಗಳಿಂದ ಆವರಿಸಿದೆ. (ಗ್ರಾಮಗಳ ಒಟ್ಟು ಕ್ಷೇತ್ರಗಳ ವಿವರ ನೀಡುವುದು).

2. ಸವಳು, ಜವಳು ಆವರಿಸಿ ರೈತರಿಗೆ ಆಪಾರ ಹಾನಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಸರ್ಕಾರವು ತೀವ್ರಗತಿಯಿಂದ ಅದರ ನಿವಾರಣೋಪಾಯಕ್ಕೆ ಯಾವಾಗ ನಿರ್ದಿಷ್ಟವಾಗಿ ಕ್ರಮ ಕೈಗೊಳ್ಳುವುದು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

1. ಒಟ್ಟು 1100 ಹೆಕ್ಟೇರ್ ಪ್ರದೇಶವು ಈ ಗ್ರಾಮಗಳಲ್ಲಿ 1976ರಿಂದ ಜವಳಾಗಿರುತ್ತದೆ. ಗ್ರಾಮವಾರು ಮಾಹಿತಿ ಲಗತ್ತಿಸಿದೆ.

2. ಹೌದು.

3. ಸವಳು, ಜವಳು ನಿವಾರಣೆಗೆ ಕೃಷಿ ಇಲಾಖೆಯಲ್ಲಿ ಯಾವುದೇ ನಿರ್ದಿಷ್ಟ ಯೋಜನೆ ಜಾರಿಯಲ್ಲಿ ಇರುವುದಿಲ್ಲ. ಆದರೆ ರೈತರಿಗೆ ಕೃಷಿ ಇಲಾಖೆಯು ಸವಳು, ಜವಳು ನಿವಾರಣೆಗೆ ತಾಂತ್ರಿಕ ಸಲಹೆಗಳನ್ನು ನೀಡುತ್ತಿದೆ.

ವಿಷಯ:- ಬಾದಾಮಿ ಬಸ್ ನಿಲ್ದಾಣದ ಎದುರುಗಡೆ ಕಟ್ಟೆಯಲ್ಲಿ ಮೇಲ್ಛಾವಣಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 220 (521)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಾದಾಮಿ ಬಸ್ ನಿಲ್ದಾಣದ ಎದುರುಗಡೆ ಕಟ್ಟೆಯಲ್ಲಿ ಮೇಲ್ಛಾವಣಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಆ) ದಿನ ನಿತ್ಯದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿ ಕಟ್ಟೆಯ ಮೇಲೆ ಕೂರುವ ಜನರಿಗೆ ನೆರಳಿಲ್ಲದೆ ಬಿಸಿಲು ಹಾಗೂ ಮಳೆಯಿಂದ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ನಿರ್ದಿಷ್ಟವಾಗಿ ಯಾವಾಗ ಮಂಜೂರಾತಿ ನೀಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಬಂದಿದೆ.